ಎಚ್.ಆರ್. ರಮೇಶ್ ಕನ್ನಡದ ಈ ಹೊತ್ತಿನ ಪ್ರಮುಖ ಕವಿಗಳಲ್ಲೊಬ್ಬರು. 'ಝೆನ್ನದಿ', 'ಅದರ ನಂತರ', 'ಮಳೆಯ ನೆರಳು', 'ಸುರಗಿ' ಅವರ ಪ್ರಕಟಿತ ಕೃತಿಗಳು. ಮೂಲತಃ ಚಿತ್ರದುರ್ಗದ ಹರಿಯಬ್ಬೆಯ ರಮೇಶ್ ಪ್ರಸ್ತುತ ಮಡಿಕೇರಿಯಲ್ಲಿ ಪ್ರಾಧ್ಯಾಪಕರು.

ಹೊರಬಂದ ನಾನು ಎನ್ನುವ ಶಬ್ದ ಯಾರದ್ದು ಮೊದಲು, ಯಾರದ್ದು ನಂತರದ್ದು ಎಂದು ವಿಂಗಡಿಸಿ ಹೇಳಲು ಸಾಧ್ಯವಾಗದಷ್ಟು ಒಂದರೊಳಗೊಂದು ಬೆರೆತುಹೋಗಿತ್ತು.

ತಿಂಡಿಯನ್ನು ಮಾಡಿಟ್ಟು, ಪ್ರತಿದಿನ ಮಧ್ಯಾಹ್ನಕ್ಕೆಂದು ಅನ್ನ ಸಾಂಬಾರನ್ನೋ, ಅಥವಾ ಚಪಾತಿ ಅಥವಾ ಮತ್ತಿತರೆ ತರಕಾರಿ ಮತ್ತು ಹಣ್ಣುಗಳ ಸಲಾಡುಗಳನ್ನು ಲಂಚ್ ಬಾಕ್ಸ್‌ಗಳಲ್ಲಿ ಇಡುತ್ತಿದ್ದ ಅವಳು, ಅವತ್ತು ಮೂರು ಲಂಚ್ ಬಾಕ್ಸ್‌ಗಳಲ್ಲಿ ಮಾಡಿದ್ದ ತಿಂಡಿಯಲ್ಲೇ ಒಂದಿಷ್ಟಿಷ್ಟನ್ನು ತುಂಬಿ ಟೇಬಲ್ಲಿನ ಮೇಲೆ ಇಟ್ಟಳು. ಮಗಳು ಸುಪರ್ಣಳನ್ನು ಸ್ಕೂಲಿಗೆ ಬಿಟ್ಟು ನಂತರ ತಾನು ಡ್ಯೂಟಿಗೆ ಹೋಗಲು ಮನಸ್ಸಿನಲ್ಲಿ ತೀರ್ಮಾನಿಸಿ, ಅವಳಿಗೆ ಸ್ನಾನ ಮಾಡಿಸಿ, ಸ್ಕೂಲಿಗೆ ರೆಡಿ ಮಾಡಿದಳು. ನಂತರ ತಾನು ಬಾತ್ ರೂಮಿಗೆ ಹೋಗಿ ಸ್ನಾನ ಮಾಡಲು ಶವರ್ ಆನ್ ಮಾಡಿದಳು. ನೀರು ತುಂಬಾ ಬಿಸಿಯಿತ್ತು. ಬಿಸಿನೀರಿನ ನಳವನ್ನು ನಿಲ್ಲಿಸಿ, ತಣ್ಣೀರಿನ ನಳವನ್ನು ಆನ್ ಮಾಡಿದಳು. ಮೈಗೆ ಹಚ್ಚಿಕೊಂಡಿದ್ದ ಸೋಪು ನೊರೆಯಾಗಿ ಬಿಸಿಲಿಗೆ ಮಂಜುಗಡ್ಡೆ ಕರಗಿ ಬೀಳುವಂತೆ ಇತ್ತು. ಆಹಾ, ಏನು ಹಿತ ತಣ್ಣೀರಿನ ಝಳಕ. ಥ್ರಿಲ್. ಆಹಾ ಎಂದು ತನ್ನ ಮನಸ್ಸಿಗೆ ಬಂದ ಹಾಡುಗಳ ಪಲ್ಲವಿಗಳನ್ನೆಲ್ಲ ಗುನುಗತೊಡಗಿದಳು. ಆ ಹಾಡುಗಳನ್ನೆಲ್ಲ ಗುನುಗುತ್ತಲೇ ಮನಸ್ಸಿನಲ್ಲಿ ಅರೆ ಯಾಕೆ ನಾವು ಅಂದುಕೊಂಡ ಹಾಗೆ ಏನು ನಡೆಯಲ್ಲ ಎಂದು ಕೇಳಿಕೊಂಡಳು. ಹೀಗೆ ನಡೆಯುತ್ತಿರುವಾಗ ಅವಳ ಮನಸ್ಸಿನಲ್ಲಿ ತನಗೆ ಅರಿವಾಗದೆ ಬದುಕಿನಲ್ಲಿ ಜರುಗಿಹೋದ ಕೆಲವು ಘಟನೆಗಳು ಅಲೆಗಳೋಪಾದಿಯಲ್ಲಿ ತೇಲಿ ಬರತೊಡಗಿದವು:

ಕಾಯಿನ್ ಬೇಡ, ನೋಟನ್ನು ಕೊಡಿ. ಅರೆ, ಇದೇನು ದುಡ್ಡು ಅಲ್ಲವಾ? ಜನ ತೆಗೆದುಕೊಳ್ಳುವುದಿಲ್ಲ, ಸುಮ್ಮನೆ ಚರ್ಚೆ ಮಾಡಬೇಡಿ, ನೋಟನ್ನು ಕೊಡಿ. ಇಲ್ಲ ರೀ ಇದನ್ನೇ ಕೊಡೋದು, ಸರ್ಕಾರಕ್ಕೆ ಅವಮಾನ ಮಾಡ್ತೀರಾ, ಒಬ್ಬ ಎಂಪ್ಲಾಯಿ ಆಗಿ ನೀವೇ ತೆಗೆದುಕೊಳ್ಳುವುದಿಲ್ಲ ಅಂದರೆ, ಸಾಮಾನ್ಯ ಜನಗಳು ತಿರಸ್ಕರಿಸುವುದನ್ನು ಬೈದು ಪ್ರಯೋಜನವಿಲ್ಲ. ನೀವು ತೆಗೆದುಕೊಂಡು ಜನರಿಗೆ ತಿಳಿವಳಿಕೆ ಹೇಳಬೇಕು. ಸರ್ಕಾರ ಐನೂರರ ನೋಟಿನ ಥರ ಇದನ್ನೇನು ಅಮಾನ್ಯಗೊಳಿಸಿದೆಯಾ? ಸುಮ್ಮನೆ ತೆಗೆದುಕೊಂಡು ಟಿಕೇಟು ಕೊಡಿ. ನಿಮ್ಮದೊಳ್ಳೆ ರೊಳ್ಳೆ ಆಯ್ತಲ್ಲ. ಇದು ನಡೆಯಲ್ಲ ಕಣ್ರಿ ಮಿಸ್ಟರ್, ನನ್ನ ಹತ್ತಿರ ಹತ್ತಿದಾವೆ, ಅವುಗಳನ್ನೇನು ಮಾಡಲಿ. ಜನಗಳಿಗೆ ಕೊಡಿ. ಅವರು ಇಸಕೊಳ್ಳಲಿಲ್ಲ ಅಂದರೆ ಮನವರಿಕೆ ಮಾಡಿ. ಅದಕ್ಕೂ ಕೇಳಲಿಲ್ಲ ಅಂದರೆ ಬ್ಯಾಂಕಿನ ಆದೇಶ ತೋರಿಸಿ. ಇಂಟರ್‌ನೆಟ್ಟಲ್ಲಿ ಸಿಗುತ್ತೆ, ಹುಡುಕಿ. ಹತ್ತು ರುಪಾಯಿಗೆಲ್ಲ ಸಾವಿರ ಮಾತಾಡ್ತೀರಲ್ಲ, ಬೇರೆ ಪ್ರಯಾಣಿಕರಿಗೆ ಸುಖಾಸುಮ್ಮನೆ ತೊಂದರೆ ಕೊಡ್ತಾ ಇದ್ದೀರ. ಅದನ್ನು ಮಾಡ್ತಾ ಇರೋದು ನೀವು ನಾನಲ್ಲ, ಸುಮ್ಮನೆ ಈ ಕಾಯಿನ್ನನ್ನು ತಗೊಂಡು ಟಿಕೇಟ್ ಕೊಡಿ. ಇಲ್ಲ ಅಂದರೆ ಸ್ಟೇಷನ್ನಿಗೆ ಹೋಗೋಣ ನಡೀರಿ. ಹೇ ಪರಮೇಶಿ, ಗಾಡಿನ ಸೈಡಿಗೆ ಹಾಕು, ಇವನು ಯಾಕೋ ಬಹಳ ಮಾತಾಡ್ತಾನೆ. ಹೇ ಕಂಡಕ್ಟರ್, ಮರ್ಯಾದೆಯಿಂದ ಮಾತಾಡಿ. ಮುಚ್ಚುಕೊಂಡು ಟಿಕೇಟ್ ತಗೋಳಲೆ. ಹೇ ನೋಡು, ನಾನು ನೀನು ಬಳಸುವ ಪದಗಳನ್ನು ಬಳಸಿದರೆ ಚೆನ್ನಾಗಿರಲ್ಲ. ಹೇ ಅಣ್ಣ ಸುಮ್ಮನೆ ಟಿಕೇಟ್ ತಗೊಳ್ಳಿ, ಆಸ್ಪತ್ರೆಗೆ ಹೊರಟದ್ದೇವೆ. ಹೇ ಟಿಕೇಟ್ ತಗಳಯ್ಯ, ಕಂಡಕ್ಟರ್ ಹತ್ತಿರ ಏನು ನಿನ್ನ ತಕರಾರು, ಹತ್ತು ರುಪಾಯಿಗೆಲ್ಲ ಸುಮ್ಮನೆ ರಾದ್ಧಾಂತ ಮಾಡ್ತೀಯ. ನಾನೇ ಕೊಡೋಣೇನ್ರಿ. ರೀ ನೀವು ಕಂಡಕ್ಟರ್‌ಗೆ ಸಪೋರ್ಟ್ ಮಾಡ್ತೀರಲ್ಲ. ಈ ಕಾಯಿನ್ ನಡೆಯಲ್ಲ ಅಂತ ಕಂಡಕ್ಟರ್ ಹೇಗೆ ಡಿಸೈಡ್ ಮಾಡ್ತಾರೆ. ಸರ್ಕಾರ

